# ಸುದ್ದಿ ಸಂಚಯ

## ರಾಮಕೃಷ್ಣ ಮಹಾಸಂಘದ ಪತ್ರಿಕೆಗಳ ಸಂಪಾದಕರ ಸಮಾವೇಶ ಮತ್ತು ಆಧ್ಯಾತ್ಮಿಕ ಪತ್ರಿಕೋದ್ಯಮದ ಮಹತ್ವದ ಬಗ್ಗೆ ವಿಚಾರಸಂಕಿರಣ



*ಸಂಪಾದಕರ ಸಮಾವೇಶದಲ್ಲಿ ಭಾಗವಹಿಸಿದ್ದ ಸಂನ್ಯಾಸಿಗಳು ಮತ್ತು ಸ್ವಯಂಸೇವಕರು*

**ಮೈಸೂರಿನ** ಶ್ರೀರಾಮಕೃಷ್ಣ ಆಶ್ರಮವು ರಾಮಕೃಷ್ಣ ಮಹಾಸಂಘದ ಪತ್ರಿಕೆಗಳ ಸಂಪಾದಕರ ಸಮಾವೇಶವನ್ನು ದಿನಾಂಕ ೨೭ . ೬ . ೨೦೦೯ ರಂದು ಏರ್ಪಡಿಸಿತ್ತು. ಭಾರತದ ವಿವಿಧ ಭಾಗಗಳಿಂದ ಆಗಮಿಸಿದ್ದ ೧೧ ಸಂಪಾದಕರು ಹಾಗೂ ಪ್ರತಿನಿಧಿಗಳು ಮತ್ತು ೬ ಸಂಪನ್ಮೂಲ ವ್ಯಕ್ತಿಗಳು ಇದರಲ್ಲಿ ಭಾಗವಹಿಸಿದ್ದರು. ರಾಮಕೃಷ್ಣ ಮಹಾಸಂಘದ ವಿವಿಧ ಪ್ರಕಟಣಾ ಕೇಂದ್ರಗಳು ಹೊರತರುತ್ತಿರುವ ನಿಯತಕಾಲಿಕೆಗಳ ಗುಣಮಟ್ಟ, ಪ್ರಸಾರ, ಪತ್ರಿಕೆಗಳ ಪ್ರಕಟಣೆಯಲ್ಲಿ ಎದುರಾಗುವ ಹಲವು ಸಮಸ್ಯೆಗಳು – ಇವುಗಳ ಬಗ್ಗೆ ವಿಚಾರವಿನಿಮಯವು ಈ ವಿಚಾರಸಂಕಿರಣದಲ್ಲಿ ನಡೆಯಿತು.

ದಿನಾಂಕ ೨೮. ೬. ೨೦೦೯ ರಂದು **ಮಾಧ್ಯಮಗಳ ಮೂಲಕ ಆಧ್ಯಾತ್ಮಿಕತೆಯ ಪ್ರಸಾರದ ಆವಶ್ಯಕತೆ** ಬಗ್ಗೆ ರಾಷ್ಟ್ರೀಯ ವಿಚಾರಸಂಕಿರಣವು ನಡೆಯಿತು. ಬೆಳಗ್ಗೆ ೯ ಗಂಟೆಯಿಂದ ಮಧ್ಯಾಹ್ನ ೧ ಗಂಟೆಯವರೆಗೆ ನಡೆದ ವಿಚಾರಸಂಕಿರಣದ ಅಧ್ಯಕ್ಷತೆಯನ್ನು ಕೊಯಮತ್ತೂರಿನ ಶ್ರೀರಾಮಕೃಷ್ಣ ವಿದ್ಯಾಲಯದ ಕಾರ್ಯದರ್ಶಿಗಳಾದ ಸ್ವಾಮಿ ಆತ್ಮಾರಾಮಾನಂದಜಿ ಅವರು ವಹಿಸಿದ್ದರು. ಈ ವಿಚಾರಸಂಕಿರಣದಲ್ಲಿ ಸ್ವಾಮಿ ಆತ್ಮವಿದಾನಂದಜಿ, ಸ್ವಾಮಿ ಬ್ರಹ್ಮಸ್ಥಾನಂದಜಿ ಮತ್ತು ಸ್ವಾಮಿ ಆತ್ಮಜ್ಞಾನಂದಜಿ ಅವರು ತಮ್ಮ ವಿಚಾರಗಳನ್ನು ಮಂಡಿಸಿದರು.

ಕೊಲ್ಕತಾದ 'ಬುಲೆಟಿನ್ ಆಫ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್' ಪತ್ರಿಕೆಯ ಸಹಾಯಕ ಸಂಪಾದಕರಾದ ಶ್ರೀ ಸ್ವರಾಜ್ ಮಜುಂದಾರ್ ಅವರು ಸ್ವಾಮಿ ವಿವೇಕಾನಂದರು ಆರಂಭಿಸಿದ ಆಂದೋಲನವು ಜನರಲ್ಲಿ ಅಧ್ಯಾತ್ಮದ ಸಂದೇಶವನ್ನು ಬಿತ್ತಿತು; ಅದೇ ರೀತಿ ಆಗಿನ ಕಾಲದ ಪತ್ರಿಕೆಗಳು ಮತ್ತು ನಿಯತಕಾಲಿಕಗಳು ಸಹ ಮೌಲ್ಯಯುತ ಗುಣಗಳನ್ನು ಬೆಳೆಸುವಲ್ಲಿ ಪರಿಣಾಮಕಾರಿ ಕೆಲಸ ಮಾಡಿದ್ದವು ಎಂಬ ಅಂಶವನ್ನು ಒತ್ತಿ ಹೇಳಿದರು.

'ಮೈಸೂರು ಮಿತ್ರ' ಪತ್ರಿಕೆಯ ಸಂಪಾದಕರಾದ ಶ್ರೀ ಕೆ.ಬಿ. ಗಣಪತಿ ಅವರು ಮಾತನಾಡಿ, ಪತ್ರಿಕೆಗಳು ಸಮಾಜದ ಕನ್ನಡಿ ಇದ್ದಂತೆ; ನಾವು ಏನನ್ನು ಕೊಡುತ್ತೇವೆಯೋ ಅದನ್ನು ತಿರುಗಿ ಪಡೆಯಬೇಕಾಗುತ್ತದೆ; ಈ ದಿಸೆಯಲ್ಲಿ ಶಿಸ್ತು, ಪ್ರಾಮಾಣಿಕತೆ ಹಾಗೂ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಮಾಜದಲ್ಲಿ ಪತ್ರಿಕೆಗಳ ಪಾತ್ರ ಮಹತ್ವವಾದುದು ಎಂದು ಅಭಿಪ್ರಾಯಪಟ್ಟರು. 'ಆಂದೋಲನ' ಪತ್ರಿಕೆಯ ಸಂಪಾದಕರಾದ ಶ್ರೀ ರಾಜಶೇಖರ ಕೋಟಿ ಅವರು, "ಆಧ್ಯಾತ್ಮಿಕತೆ ಎಂದರೆ ಒಳ್ಳೆಯದನ್ನು ಯೋಚಿಸುವುದು, ಒಳ್ಳೆಯದನ್ನು ಬಯಸುವುದು, ಒಳ್ಳೆಯದನ್ನು ಮಾಡುವುದು ಎಂದು ನಾನು ಭಾವಿಸಿದ್ದೇನೆ. ಮೌಲ್ಯಯುತ ವಿಚಾರಧಾರೆಗಳು ಪತ್ರಿಕೋದ್ಯಮಕ್ಕೂ ಅಗತ್ಯವಾಗಿದ್ದು, ಯುವಪೀಳಿಗೆಯನ್ನು ರೂಪಿಸಲು ಈ ವಿಚಾರಸಂಕಿರಣ ಪ್ರೇರಕವಾಗಲಿದೆ. ಜಾತಿ, ಪಂಗಡ ಹಾಗೂ ಧರ್ಮಕ್ಕೆ ಸೀಮಿತವಾದ ಆಧ್ಯಾತ್ಮಿಕ ಪತ್ರಿಕೆಗಳು ಸಾಕಷ್ಟಿದ್ದು, ಇದರ ನಡುವೆ ಯಾವುದೇ ಜಾತಿ, ವರ್ಗಕ್ಕೆ ಸೀಮಿತವಾಗದೆ ಪ್ರಕಟವಾಗುತ್ತಿರುವ ರಾಮಕೃಷ್ಣ ಆಶ್ರಮದ 'ವಿವೇಕಪ್ರಭ' ಪತ್ರಿಕೆಯು ವಿಚಾರಪೂರಿತ ಲೇಖನಗಳು ಹಾಗೂ ಬರಹಗಳಿಂದ ಮನಸೆಳೆಯುತ್ತಿದೆ" ಎಂದು ತಿಳಿಸಿದರು.

'ಪ್ರಜಾವಾಣಿ' ಪತ್ರಿಕೆಯ ಮೈಸೂರು ನಗರದ ಹಿರಿಯ ವರದಿಗಾರರಾದ ಶ್ರೀ ರವೀಂದ್ರ ಭಟ್ ಅವರು ಮಾತನಾಡಿ, ಪತ್ರಿಕೋದ್ಯಮದ ಆತ್ಮಾವಲೋಕನಕ್ಕಾಗಿ ಸುದ್ದಿ ಸಂಪಾದಕರು ಹಾಗೂ ಮಾಲೀಕರಿಗೆ ಕಾರ್ಯಾಗಾರವನ್ನು ನಡೆಸುವ ಅವಶ್ಯಕತೆ ಇದೆ ಎಂದು ಹೇಳಿದರು. ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ ಮೊದಲಾದ ಮಹನೀಯರನ್ನು ಕುರಿತು ಯುವ ಪತ್ರಕರ್ತರಿಗೆ ತಿಳಿಸುವ ಸಲುವಾಗಿ ವಿವೇಕಪ್ರಭವು ಮಾಧ್ಯಮ ಅಕಾಡೆಮಿಯ ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸಲಹೆ ನೀಡಿ, ಇಂತಹ ಯೋಜನೆಗಳಿಂದ ಮುಖ್ಯವಾಹಿನಿಯ ಪತ್ರಿಕೋದ್ಯಮಕ್ಕೂ ಒಳಿತಾಗುತ್ತದೆ ಎಂದು ಹೇಳಿದರು.

ಸಂಜೆ ಐದು ಗಂಟೆಗೆ ಸ್ವಾಮಿ ಆತ್ಮಜ್ಞಾನಂದಜಿ ಅವರ ಸುಮಧುರ ಭಜನೆಯಿಂದ ಸಾರ್ವಜನಿಕ ಸಮಾರಂಭ ಆರಂಭವಾಯಿತು. ಸುಪ್ರಸಿದ್ಧ ಅಂಕಣಕಾರರು ಮತ್ತು ಅರ್ಥಶಾಸ್ತ್ರಜ್ಞರಾದ ಶ್ರೀ ಎಸ್. ಗುರುಮೂರ್ತಿ ಅವರು ಆಧ್ಯಾತ್ಮಿಕತೆ ಮತ್ತು ನೈತಿಕ ಮೌಲ್ಯಗಳ ಆಧಾರದ ಮೇಲೆ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಬೇಕು ಎಂದು ಅಭಿಪ್ರಾಯಪಟ್ಟರು. ಮುಂದುವರಿದು, "ಭಾರತೀಯ ಸಮಾಜವು ಬಹಳ ವಿಧಾನಗಳಲ್ಲಿ ಪಾಶ್ಚಿಮಾತ್ಯ ಜಗತ್ತನ್ನು ಅನುಸರಿಸುತ್ತಿದ್ದರೂ, ಇಲ್ಲಿನ ಜನರ ಹಾಗೂ ಕುಟುಂಬಗಳ ಭದ್ರತೆಯನ್ನು ಕಾಪಾಡುತ್ತಿರುವುದು ಇದರ ಸಶಕ್ತ ಧಾರ್ಮಿಕ ಮನೋಭಾವ ಮತ್ತು ಆಧ್ಯಾತ್ಮಿಕ ಪರಂಪರೆಯೇ. ಭಾರತೀಯ ಅರ್ಥಶಾಸ್ತ್ರ ಕೂಡ ಭಾರತೀಯ ಸಭ್ಯತೆಯು ಮೈಗೂಡಿಸಿಕೊಂಡಿರುವ ಉದಾತ್ತ ಆಧ್ಯಾತ್ಮಿಕ ಮತ್ತು

ನೈತಿಕ ನಂಬಿಕೆಗಳಿಂದಲೇ ಪರಿಪುಷ್ಟವಾಗಿದೆ" ಎಂದು ನುಡಿದರು.

ಮಾನವಶಾಸ್ತ್ರ ಮತ್ತು ನಾಗರಿಕತೆಗಳ ಸುಪ್ರಸಿದ್ಧ ವಿದ್ವಾಂಸರಾದ ಡಾ. ಎನ್. ಎಸ್. ರಾಜಾರಾಮ್ ಅವರು ನಾಗರಿಕತೆಗಳ ಮೂಲದ ಸಂಶೋಧನೆಯಲ್ಲಿ ಇತ್ತೀಚಿಗೆ ನಡೆಯುತ್ತಿರುವ ಹೊಸ ಅನ್ವೇಷಣೆಗಳ ಪ್ರಾಮುಖ್ಯತೆಯನ್ನು ವಿವರಿಸಿ ಹೇಳಿದರು. ಸತ್ಯದ ಅನ್ವೇಷಣೆಯಲ್ಲಿ ಸ್ವತಂತ್ರವೂ ನಿಷ್ಕಾರುಣವೂ ಆದ ಚರ್ಚೆ ನಡೆಯುವುದು ಬಹಳ ಅವಶ್ಯ. ಇಂದು ನಮ್ಮ ದೇಶದಲ್ಲಿ ಇದು ಇಲ್ಲದಿರುವುದು ದುರದೃಷ್ಟಕರ. ನಮ್ಮ ದೇಶದ ಜನರಲ್ಲಿ ಕ್ಷಾತ್ರಧರ್ಮವು ಉದ್ದೀಪನಗೊಳ್ಳಬೇಕು. ಈ ಕ್ಷಾತ್ರಧರ್ಮವು ಆಧ್ಯಾತ್ಮಿಕತೆಯ ಒಂದು ಅಂಗವೇ ಆಗಿದೆ. ಕ್ಷಾತ್ರಧರ್ಮ ಮತ್ತು ಬ್ರಾಹ್ಮಧರ್ಮಗಳ ಸಂಯೋಗ ಸಮಾಜದಲ್ಲಿ ಆಗಬೇಕು. ದುರ್ಬಲತೆಯು ಆಧ್ಯಾತ್ಮಿಕತೆಯ ಚಿಹ್ನೆಯಲ್ಲ ಎಂದು ನುಡಿದರು.



ಸಂಜೆಯ ಕಾರ್ಯಕ್ರಮದಲ್ಲಿ, ಎಡದಿಂದ ಸ್ವಾಮಿ ನಿತ್ಯಸ್ಥಾನಂದಜಿ, ಶ್ರೀ ಎಸ್. ಗುರುಮೂರ್ತಿ, ಶ್ರೀ ರಾಜೀವ್ ಮೆಹ್ರೋತ್ರಾ, ಸ್ವಾಮಿ ಸುರೇಶಾನಂದಜಿ, ಸ್ವಾಮಿ ಗೌತಮಾನಂದಜಿ, ಡಾ. ಎನ್. ಎಸ್. ರಾಜಾರಾಮ್

ಸುಪ್ರಸಿದ್ಧ ಮಾಧ್ಯಮ ಪ್ರಸ್ತುತಿಕಾರರೂ ಬರಹಗಾರರೂ ಆದ ಶ್ರೀ ರಾಜೀವ್ ಮೆಹ್ರೋತ್ರಾ ಅವರು ಬೆಳಗಿನ ವಿಚಾರ ಸಂಕಿರಣದಲ್ಲಿ ಮತ್ತು ಸಂಜೆಯ ಸಾರ್ವಜನಿಕ ಸಮಾರಂಭದಲ್ಲಿ ಕೂಡ ಮಾತನಾಡಿ, ಬಂಡವಾಳಶಾಹಿ ಸಂಸ್ಕೃತಿಗೆ ಪತ್ರಿಕಾಮಾಧ್ಯಮವೂ ಹೊರತಲ್ಲ ಎಂದು ಅಭಿಪ್ರಾಯಪಟ್ಟರು. ಆದ್ದರಿಂದಲೇ ಆಧ್ಯಾತ್ಮಿಕ ಭಾವನೆಗಳನ್ನು ಮಾಧ್ಯಮದ ಮೂಲಕ ಬರವಣಿಗೆಗೆ ಇಳಿಸುವುದು ಕಷ್ಟಸಾಧ್ಯ. ಆದರೆ ಆಧ್ಯಾತ್ಮಿಕತೆಯ ಮೌಲ್ಯಗಳ ಪ್ರಾಮುಖ್ಯತೆಯನ್ನು ಕಡಮೆ ಮಾಡಲು ಸಾಧ್ಯವಿಲ್ಲ. ಇದು ನಮ್ಮ ಸಮೃದ್ಧ ನಾಗರಿಕತೆ ಮತ್ತು ಪರಂಪರೆಯ ಅವಿಭಾಜ್ಯ ಅಂಗವಾಗಿದೆ. ಆದರೆ ಅವುಗಳನ್ನೇ ಸಂಪೂರ್ಣವಾಗಿ ನೆಚ್ಚಿಕೊಂಡು, ಸಂಕುಚಿತ ಮನೋಭಾವವನ್ನು ಬೆಳೆಸಿಕೊಳ್ಳುವುದು ಅನೇಕ ಸಮಸ್ಯೆಗಳಿಗೆ ಈಡುಮಾಡುತ್ತದೆ. ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ವಿಶ್ವವ್ಯಾಪಕ ತತ್ತ್ವಗಳನ್ನು ತಾವು ಬಾಳಿದ ಕಾಲಮಾನ ಮತ್ತು ಪರಿಸ್ಥಿತಿಗಳಿಗೆ ಹೊಂದುವಂತೆ ಅಳವಡಿಸಿಕೊಂಡು ಉಪದೇಶಿಸಿದರು. ಅದೇ ರೀತಿ ಈಗಿನ ಸಂದರ್ಭಕ್ಕೆ ಅನುಸಾರವಾಗಿ ಆಧ್ಯಾತ್ಮಿಕ ಮೌಲ್ಯಗಳನ್ನು ಬೋಧಿಸುವುದೇ ಆಧ್ಯಾತ್ಮಿಕ ಪತ್ರಿಕೋದ್ಯಮದ ಆದ್ಯ ಕರ್ತವ್ಯ. ಪತ್ರಿಕೋದ್ಯಮದ ಮುಖ್ಯ ಕರ್ತವ್ಯವೆಂದರೆ, ವರ್ತಮಾನವು ಅನಾವರಣಗೊಳ್ಳುತ್ತಿರುವುದನ್ನು ದಾಖಲಿಸುವುದು. ಆಧ್ಯಾತ್ಮಿಕ ಪತ್ರಿಕೋದ್ಯಮವೆಂದರೆ, ಮೌಲ್ಯಗಳ ಚೌಕಟ್ಟಿನ ಒಳಗೆ ಪತ್ರಿಕೋದ್ಯಮದ ಕರ್ತವ್ಯವನ್ನು ನಿರ್ವಹಿಸುವುದು. ಆದರೆ ಸತ್ಯವು ಹೀಗೇ ಇದೆ ಎಂದು ನಿರ್ದಿಷ್ಟವಾಗಿ ಹೇಳಲಾಗದು. ಸತ್ಯವು ಯಾವಾಗಲೂ ಸಾಪೇಕ್ಷವಾಗಿರುತ್ತದೆ. ವಿವಿಧ ಜನರ ಅನುಭವದ ಮೇಲೆ ಸತ್ಯದ ಪರಿಕಲ್ಪನೆಯು ಬಗೆಬಗೆಯಾಗಿರುತ್ತದೆ. ನಮ್ಮ ದೈನಂದಿನ ಜೀವನದ ವಾಸ್ತವಿಕತೆಯು ವೈವಿಧ್ಯಮಯವಾಗಿದೆ. ಆದ್ದರಿಂದ ಇದೇ ಸರಿ, ಇದೇ ತಪ್ಪು ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದಕ್ಕಿಂತ ಹೆಚ್ಚಾಗಿ ಪತ್ರಿಕಾಕರ್ತನು ತನ್ನ ಬರಹಗಳ ಹಿನ್ನೆಲೆಯಲ್ಲಿ ಹೊಂದಿರುವ ಮನೋಭಾವವೇ ಪ್ರಮುಖವಾದುದು. ಇವತ್ತಿನ ವಿಷಯ ಆಧ್ಯಾತ್ಮಿಕ ಪತ್ರಿಕೋದ್ಯಮವೇ ಹೊರತು, ಧಾರ್ಮಿಕ ಪತ್ರಿಕೋದ್ಯಮವಲ್ಲ. ಸತ್ಯದ ಅನ್ವೇಷಣೆಯ ಹುರುಪಿನಲ್ಲಿ ಸಂಕುಚಿತ ಮನೋಭಾವವನ್ನು ನಾವು ಬೆಳೆಸಿಕೊಳ್ಳಬಾರದು. ರಾಮಕೃಷ್ಣ ಮಿಷನ್ ತನ್ನ ಚಟುವಟಿಕೆಗಳನ್ನು ನಡೆಸುತ್ತಿರುವುದು ಉದಾರವಾದ ಆಧ್ಯಾತ್ಮಿಕ ಪರಿಧಿಯಲ್ಲಿಯೇ ಹೊರತು, ಸಂಕುಚಿತವಾದ ಮತೀಯ ಆಯಾಮದಲ್ಲಲ್ಲ. ಆಧ್ಯಾತ್ಮಿಕತೆಯು ಜನರ ದಿನನಿತ್ಯದ ಸಮಸ್ಯೆಗಳಿಗೆ ಪರಿಹಾರ ನೀಡಬೇಕು. ಧರ್ಮ ಒಂದು ಜನಾಂಗದ ಹಿರಿಮೆಯನ್ನು ಎತ್ತಿಹೇಳುವ ಪೊಳ್ಳು ಘೋಷಣೆಯಾಗಬಾರದು. ಆಧ್ಯಾತ್ಮಿಕತೆಯು ವಾಸ್ತವಿಕತೆಯ ಆಧಾರದಲ್ಲಿ ಆಚರಿಸಲ್ಪಡಬೇಕು. ಅದು ಈ ಕಾಲದ ಭಾಷೆಯಲ್ಲಿ ವ್ಯಕ್ತವಾಗಿದ್ದು, ಇಂದಿನ ಸಮಸ್ಯೆಗಳಿಗೆ ಸ್ಪಂದಿಸಬೇಕು. ನಿಜವಾದ ಶಕ್ತಿ ಎಂದರೆ ಆಧ್ಯಾತ್ಮಿಕ ಶಕ್ತಿಯೇ ಹೊರತು, ಹಿಂಸಾತ್ಮಕ ಮಾರ್ಗಗಳಿಂದ ಪರಿಹಾರವನ್ನು ಕಂಡುಕೊಳ್ಳುವ ದೈತ್ಯಬಲವಲ್ಲ. ಅಂತಹ ಆಧ್ಯಾತ್ಮಿಕ ಶಕ್ತಿಯ ಉತ್ಥಾನವಾಗಲಿ. ಇದರಿಂದ ಬರುವ ಆತ್ಮವಿಶ್ವಾಸ, ಒಳ್ಳೆಯತನ, ಅನುಕಂಪ, ಪ್ರೀತಿ, ನಿರಹಂಕಾರ, ವಿನಯಗಳಿಂದ ಮಾತ್ರವೇ ಸಮಾಜದ ಕಲ್ಯಾಣ ಸಾಧ್ಯ. ಇದೇ ನಮ್ಮ ನಾಗರಿಕತೆಯ ಸಾರತತ್ತ್ವ ಎಂದು ಅವರು ವಿಶ್ಲೇಷಿಸಿದರು.



ನೆರೆದಿದ್ದ ಸಾಧುಗಳು ಮತ್ತು ವಿವೇಕಪ್ರಭದ ಅಭಿಮಾನಿಗಳು

ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಅವರು ಮುಖ್ಯ ಅತಿಥಿಗಳಾಗಿದ್ದರು. ಮೈಸೂರು ಆಶ್ರಮದ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಸುರೇಶಾನಂದಜಿ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಬೆಳಗ್ಗೆ ಮತ್ತು ಸಂಜೆಯ ಕಾರ್ಯಕ್ರಮಗಳಲ್ಲಿ ಒಟ್ಟಾರೆ ೪೦೦ ಕ್ಕೂ ಅಭಿಮಾನಿಗಳು ಭಾಗವಹಿಸಿದ್ದರು.